ಸ್ಥಳೀಯ ಸಂಸ್ಥೆಗಳ ಚುನಾವಣೆಗಳು

೬೧೦ ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮಂಗಳೂರು).— ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಪುರಸಭೆಗಳಿಗೆ ಹಾಗೂ ಮಹಾನಗರಪಾಲಿಕೆಗಳಿಗೆ ಚುನಾವಣೆಗಳನ್ನು ಯಾವಾಗ ನಡೆಸಲಾಗುವುದು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಪುರಸಭೆಗಳಿಗೆ ಹಾಗೂ ಮಹಾನಗರಪಾಲಿಕೆಗಳಿಗೆ ಜೂನ್ ೧೯೮೯ರ ಕೊನೆಯೊಳಗೆ ಚುನಾವಣೆ ನಡೆಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಸಭೆಯ ಮುಂದಿಡಲಾದ ಕಾಗದಪತ್ರಗಳು

ಪ್ರೊ॥ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಮುಖ್ಯಮಂತ್ರಿಗಳ ಹೆಸರಿನ ವರದಿರುವ

ಭಾರತ ಸಂವಿಧಾನದ ೧೫೨ (೨)ನೇ ಪರಿಚ್ಛೇದದ ಮೇರೆಗೆ ಭಾರತದ ನಿಯಂತ್ರಣ ಹಾಗೂ ಮಹಾ ಲೇಖಾಪಾಲಕರವರ ಕರ್ನಾಟಕ ಸರ್ಕಾರದ ೧೯೮೬–೮೭ನೇ ಸಾಲಿನ (ವಾಣಿಜ್ಯ)ಕ್ಕೆ ಸಂಬಂಧಿಸಿದ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಪ್ರೊ॥ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು).— ೧೯೮೬ನೇ ಇಸವಿಯ ರಾಷ್ಟ್ರೀಯ ಕಾನೂನು ಶಾಲಾ ಶಾಸನದ ೨೦ (೨)ನೇ ಕಲಮಿನ ಮೇರೆಗೆ

"ರಾಷ್ಟ್ರೀಯ ಕಾನೂನು ಶಾಲೆ ಶಾಸನದ ಶೆಡ್ಯೂಲ್‌ಗೆ ತಿದ್ದುಪಡಿ ಮಾಡುವ ಬಗ್ಗೆ ದಿನಾಂಕ ೭ನೇ ಡಿಸೆಂಬರ್ ೧೯೮೮ರಂದು ಹೊರಡಿಸಲಾದ ಜಿಎ ೧೦೫–೮೮ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಕಾಗದ ಪತ್ರಗಳನ್ನು ಮಂಡಿಸಲಾಯಿತು.

ವರದಿಗಳನ್ನೊಪ್ಪಿಸುವುದು

ಶ್ರೀ ಡಿ. ಟಿ. ಜಯಕುಮಾರ್ (ಅಧ್ಯಕ್ಷರು, ಅಧೀನ ಶಾಸನ ರಚನಾ ಸಮಿತಿ).— ಮಾನ್ಯ ಅಧ್ಯಕ್ಷರೆ, ಅಧೀನ ಶಾಸನ ರಚನಾ ಸಮಿತಿಯ ೧೧ನೇ ಹಾಗೂ ೧೨ನೇ ವರದಿಗಳನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು.— ವರದಿಯನ್ನು ಒಪ್ಪಿಸಲಾಯಿತು. ಈಗ ಒಟ್ಟು ನಾಲ್ಕು ಅಡ್ಜರ್ನ್‌ಮೆಂಟ್ ಮೋಶನ್‌ಗಳು ಬಂದಿವೆ ಒಂದು ಶ್ರೀ ಎಂ. ಎಸ್. ನಾರಾಯಣರಾವ್, ಹೆಚ್. ಎಲ್. ತಿಮ್ಮೇಗೌಡ, ಭೈರೇಗೌಡರು, ಜಿ.ವಿಜಯ, ಯಡಿಯೂರಪ್ಪ, ವೆಂಕಟರಾಮಯ್ಯ, ಎಂ. ಎಸ್. ಕೃಷ್ಣನ್ ಮತ್ತು ಭೂಪತಿಯವರು ಸಹಿ ಮಾಡಿರುವುದು. ಮತ್ತೊಂದು ಶ್ರೀ ವೆಂಕಟರಾಮಯ್ಯನವರು, ಎಂ. ಎಸ್ ಕೃಷ್ಣನ್ ಹಾಗೂ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಮತ್ತು ವೀರಪ್ಪ ಮೊಯಿಲಿಯವರದ್ದು. ಇವುಗಳಲ್ಲಿ ಎರಡು, ಶ್ರೀ ವೆಂಕಟರಾಮಯ್ಯ ಮತ್ತು ಎಂ. ಎಸ್. ಕೃಷ್ಣನ್ ಅವರದು ವಿದ್ಯುತ್ ಕೊರತೆ ಮತ್ತು ಲೋಡ್ ಶೆಡ್ಡಿಂಗ್ ಬಗ್ಗೆ. ಇದನ್ನು ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತಿಸಿ ನಾಳೆ ಇಡಿಸುತ್ತೇನೆ. ಮತ್ತೊಂದು ಶ್ರೀ ವೆಂಕಟರಾಮಯ್ಯನವರು, ಶ್ರೀ ಟಿ. ಎಸ್. ಮಣಿಯವರು ಕೊಟ್ಟಿದ್ದುದು ಬೆಂಗಳೂರು ನಗರದಲ್ಲಿ ಆಟೋರಿಕ್ಷಾ ಸ್ಟ್ರೈಕ್ ಬಗ್ಗೆ. ಅದನ್ನು ಗಮನ ಸೆಳೆಯುವ ಸೂಚನೆಯಾಗಿ ಕನ್ವರ್ಟ್ ಮಾಡಿ ನಾಳೆ ಇಡಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.— ಇವತ್ತು ೧೫ ಸಾವಿರ ಆಟೋರಿಕ್ಷಾಗಳು ಬೀದಿಗಳಲ್ಲಿ ಇಲ್ಲ. ಬಹಳ ಅವ್ಯವಸ್ಥೆಯಾಗಿದೆ. ಆದ್ದರಿಂದ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಇದೆ.

ಅಧ್ಯಕ್ಷರು.— ನೀವು ಸ್ವಲ್ಪ ಕುಳಿತುಕೊಳ್ಳಿ, ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—೨೪ ಸಾವಿರ ಜನ ಸ್ಟ್ರೈಕ್ ಮಾಡುತ್ತಿದ್ದಾರೆ. ಸರ್ಕಾರದವರು...